**ಕರ್ನಾಟಕ ಸರ್ಕಾರ**

DTE-ADMI0EST(10)/62/2023-JD-DEPT TECH /986

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001.
ದಿನಾಂಕ: 15.11.2023

# ಹಿಂಬರಹ

ವಿಷಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳನ್ನು ಸಹ ಪ್ರಾಧ್ಯಾಪಕರಾಗಿ ಮರುಪದನಾಮೀಕರಿಸುವ ಬಗ್ಗೆ.

ಉಲ್ಲೇಖ: ಡಾ.ರವಿರಾಜ್ ಮತ್ತು ಇತರರು ಮನವಿ ದಿನಾಂಕ 08.08.2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ರವಿರಾಜ್ ಮತ್ತಿತರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 51964/2015 ರಲ್ಲಿ ದಿನಾಂಕ: 18.02.2016 ರ ಆದೇಶವನ್ನು ಅನುಷ್ಠಾನಗೊಳಿಸಿ, ತಮ್ಮನ್ನು ಸಹಾಯಕ ಪ್ರಾಧ್ಯಾಪಕರಿಂದ ಸಹಪ್ರಾಧ್ಯಪಕರಾಗಿ ಮರು ಪದನಾಮಿಕರಿಸಲು ಕೋರಿ ಮನವಿ ಸಲ್ಲಿಸಿರುವುದು ಸರಿಯಷ್ಟೆ. ಈ ವಿಷಯದ ಬಗ್ಗೆ ಪರಿಶೀಲಿಸಲಾಗಿ, 2012 ರ ಎಐಸಿಟಿಇ ರೆಗ್ಯುಲೇಷನ್ ಅನ್ವಯ ಸಹಪ್ರಾಧ್ಯಪಕರಾಗಿ ಮರುಪದನಾಮೀಕರಿಸಲು ಪ್ಯಾರಾ 3.8 ರಲ್ಲಿ ಈ ಕೆಳಕಂಡಂತೆ ಅರ್ಹತೆಯನ್ನು ನಿಗದಿಪಡಿಸಲಾಗಿದೆ.

"**Assistant Professor** completing three years of teaching in the grade pay of Rs.8000 (stage 3) shall be eligible, subject to the qualifying conditions and the API based requirements prescribed by the regulations to move to the pay band of Rs. 37400-67000 with next higher grade pay of Rs. 9000 (stage 4) and to be designated as Associate Professor. However, those joining the service after $5^{th}$ March 2010 shall have to also earn Ph.D. in addition to above mentioned requirements to move to the stage 4.

ಮುಂದುವರೆದು, ದಿನಾಂಕ: 04.01.2016 ರ ಎಐಸಿಟಿಇ ಸ್ಪಷ್ಟೀಕರಣದ ಕ್ರ.ಸಂಖ್ಯೆ.35 ರಲ್ಲಿ AICTE ರೆಗ್ಯುಲೇಷನ್-2012 ಗಳು 2010 ರ ರೆಗ್ಯುಲೇಷನ್‌ನ ಮುಂದುವರೆದ ಭಾಗವಾಗಿದ್ದು, 2012 ರ ರೆಗ್ಯುಲೇಷನ್‌ನಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳು Incumbent ಮತ್ತು ಹೊಸದಾಗಿ ಸೇವೆಗೆ ಸೇರಿದ ಅಭ್ಯರ್ಥಿಗಳಿಗೂ ಅನ್ವಯಿಸುತ್ತವೆಯೆಂದು ಈ ಕೆಳಕಂಡಂತೆ ತಿಳಿಸಲಾಗಿದೆ.

| | | |
|---|---|---|
| 35 | Whether CAS guidelines issued in 2012 (Degree/Diploma) are in continuation of AICTE Regulations, 2010 and its applicability to the existing incumbent. | AICTE Regulations, 2012 have been issued incontinuation of AICTE Regulations, 2010. All conditions laid down shall be applicable to **existing incumbent as well as for newly recruited teachers** (as defined in AICTE Regulations, 2012), unless otherwise specified separately. This Regulation is applicable as per the proviso of Rule 1.3 of AICTE Regulations, 2012. |

ಇದಲ್ಲದೆ, ದಿನಾಂಕ 05.03.2010 ರಂದು ಮತ್ತು ತದನಂತರ ಸೇವೆಗೆ ಸೇರಿರುವವರು ವೇತನ ಶ್ರೇಣಿ ಹಂತ-03ರಲ್ಲಿ 03 ವರ್ಷಗಳ ಸೇವೆಯನ್ನು ಸಲ್ಲಿಸುವುದರೊಂದಿಗೆ ಸಂಬಂಧಿತ ವಿಷಯದಲ್ಲಿ ಪಿಹೆಚ್‌ಡಿ ಪದವಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಬಗ್ಗೆ ಎಐಸಿಟಿಇಯ ಅಧಿನಿಯಮ ಸಂ: F.No. 27-4/AICTE/RIFD/ Pay Scale/2018-19 ದಿನಾಂಕ: 20.05.2020 ರ ಸ್ಪಷ್ಟೀಕರಣದಲ್ಲಿ ಕೆಳಕಂಡಂತೆ ಪುನರುಚ್ಚರಿಸಲಾಗಿದೆ.

| | | |
|---|---|---|
| 7 | Whether qualification of Ph.D. can be relaxed for grade pay of Rs. 9,000/- in Diploma/Degree level. Institutions? | No.<br>No relaxation in the mandatory requirements for Ph.D. degree shall be given to the candidates for the promotion in the grade pay of Rs. 9,000/- with effect from 5th March 2010. |

ಮುಂದುವರೆದು, ಎಐಸಿಟಿಇ 6ನೆಯ ಪರಿಷ್ಕೃತ ವೇತನ ಶ್ರೇಣಿಗಳು ಮತ್ತು ಅದರ ಷರತ್ತುಗಳು ದಿನಾಂಕ: 05.03.2010 ರಿಂದ 28.02.2019 ರವರೆಗೂ ಅಸ್ತಿತ್ವದಲ್ಲಿದ್ದು, ದಿನಾಂಕ: 01.03.2019 ರಿಂದ 7ನೇ ಎಐಸಿಟಿಇ ವೇತನ ಶ್ರೇಣಿಗಳು ಜಾರಿಗೆ ಬಂದಿರುವುದರಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಮರುಪದನಾಮೀಕರಿಸಲು ಮೇಲೆ ತಿಳಿಸಲಾಗಿರುವ ಎಲ್ಲಾ ಷರತ್ತುಗಳೂ ಎಐಸಿಟಿಇ 6ನೇ ವೇತನ ಶ್ರೇಣಿ ಜಾರಿಯಲ್ಲಿರುವವರೆಗೆ ಮಾತ್ರ ಅನ್ವಯವಾಗುತ್ತವೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ರವಿರಾಜ್ ಮತ್ತು ಇತರರು ಸಹಾಯಕ ಪ್ರಾಧ್ಯಾಪಕರಾಗಿ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದರೂ, ಸಹ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ದಿನಾಂಕದಂದು ಸಹಪ್ರಾಧ್ಯಪಕರಾಗಿ ಮರು ಪದನಾಮಿಕರಿಸಲು ಎಐಸಿಟಿಇಯು ನಿಗದಿಪಡಿಸಿರುವ ಸಂಬಂಧಪಟ್ಟ ವಿಷಯದಲ್ಲಿ Ph.D. ಪದವಿಯೊಂದಿಗೆ ಅಲ್ಪಾವಧಿ ತರಬೇತಿ ಹಾಗೂ ಸಂಶೋಧನಾ ಲೇಖನ (Research paper publication) ಪ್ರಕಟಣೆ ಹಾಗೂ ಇತರೆ ಅರ್ಹತಾ ಮಾನದಂಡಗಳನ್ನು ಪೂರೈಸದ ಕಾರಣ ತಮ್ಮನ್ನು ಸಹ ಪ್ರಾಧ್ಯಾಪಕರ ಹುದ್ದೆಗೆ ಮರುಪದನಾಮೀಕರಿಸಲು ಅವಕಾಶವಿರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ನಿರ್ದೇಶಕರು(ಪ್ರಭಾರ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,
1) ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ: 866/2023 ರಲ್ಲಿನ ಸಂಬಂಧಪಟ್ಟ ಎಲ್ಲಾ ಅರ್ಜಿದಾರರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ. (ಪ್ರಾಂಶುಪಾಲರ ಮುಖಾಂತರ).